ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 22/2018**

ಪ್ರಾ.ಸಾ. **:- 03**

| | | |
|---|---|---|
| ಹೆಸರು | : | ಶಿವಸ್ವಾಮಿ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಎ.ಎಸ್.ಐ., |
| ವಾಸಸ್ಥಳ | : | ಶ್ರೀರಂಗಪಟ್ಟಣ |

ಪ್ರಮಾಣೀಕರಿಸಲಾದ ದಿನಾಂಕ **: 07.07.2026**

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ.**299** ರಡಿಯಲ್ಲಿ ಸಾಕ್ಷಿಯ ವಿಚಾರಣೆ :</u>

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>

ನಾನು 2022 ರಿಂದ ಇಲ್ಲಿಯವರೆಗೂ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಿನಾಂಕಃ 05.08.2024 ರಂದು ಆರೋಪಿಯ ವಿರುದ್ಧ ಹೊರಡಿಸಲಾದ ಉದ್ಘೋಷಣೆಯ ಪ್ರಕಟಣೆಗಾಗಿ ಆರೋಪಿಯ ವಿಳಾಸವಾದ ಮೈಸೂರಿನ ಮಂಡಿ ಮೊಹಲ್ಲಾಕ್ಕೆ ಹೋಗಿ, ಸದರಿ ಜಾಗದ ನಿವಾಸಿಗಳನ್ನು 1 ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಸದರಿಯವರು ಆರೋಪಿಯು ವಾಸ ಮಾಡುತ್ತಿದ್ದ ಮನೆಯನ್ನು ಬಿಟ್ಟು ಬೇರೆಡೆಗೆ ಹೋಗಿರುವುದಾಗಿ ಎಂದು ತಿಳಿಸಿರುತ್ತಾರೆ.

ಸದರಿ ವಿಳಾಸದಲ್ಲಿ ಆರೋಪಿ ಮುಂಚೆ ವಾಸವಿದ್ದ ಮನೆಯ ಆವರಣದಲ್ಲಿ ಊರಿನ ನಿವಾಸಿಗಳು ಹಾಗೂ ಪಂಚರ ಸಮಕ್ಷಮದಲ್ಲಿ ಆರೋಪಿಯ ವಿರುದ್ಧ ಹೊರಡಿಸಿದ್ದ ಉದ್ಘೋಷಣೆಯನ್ನು ಓದಿ ಹೇಳಿರುತ್ತೇನೆ ಹಾಗೂ ಉದ್ಘೋಷಣೆಯ ಒಂದು ಪ್ರತಿಯನ್ನು

ಸ್ಥಳದಲ್ಲಿ ಅಂಟಿಸಿರುತ್ತೇನೆ. ನಂತರದಲ್ಲಿ ನ್ಯಾಯಾಲಯದ ಆವರಣದಲ್ಲಿಯೂ ಉದ್ಘೋಷಣೆಯ ಒಂದು ಪ್ರತಿಯನ್ನು ಅಂಟಿಸಿರುತ್ತೇನೆ. ಸದರಿ ಉದ್ಘೋಷಣೆಯ ಸಮಯದಲ್ಲಿ ಮಾಡಿದ ಮಹಜರ್ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-6 ಎಂದು ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಉದ್ಘೋಷಣೆಗೆ ಸಂಬಂಧಿಸಿದಂತೆ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗ ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು.

ಮುಂದುವರೆದು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಿನಾಂಕಃ 05.08.2023 ರಂದು ಆರೋಪಿಯ ವಿರುದ್ಧ ಹೊರಡಿಸಲಾದ ಉದ್ಘೋಷಣೆಯ ಪ್ರಕಟಣೆಗಾಗಿ ಆರೋಪಿಯ ವಿಳಾಸವಾದ ಬೆಂಗಳೂರು ನಗರದ ಕನಕನಗರದ ಫೈಯಾಜಬಾದ್ ಗೆ ಹೋಗಿ, ಸದರಿ ಜಾಗದ ನಿವಾಸಿಗಳನ್ನು 2 ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಸದರಿಯವರು ಆರೋಪಿಯು ವಾಸ ಮಾಡುತ್ತಿದ್ದ ಮನೆಯನ್ನು ಬಿಟ್ಟು ಬೇರೆಡೆಗೆ ಹೋಗಿರುವುದಾಗಿ ಎಂದು ತಿಳಿಸಿರುತ್ತಾರೆ.

ಸದರಿ ವಿಳಾಸದಲ್ಲಿ ಆರೋಪಿ ಮುಂಚೆ ವಾಸವಿದ್ದ ಮನೆಯ ಆವರಣದಲ್ಲಿ ಊರಿನ ನಿವಾಸಿಗಳು ಹಾಗೂ ಪಂಚರ ಸಮಕ್ಷಮದಲ್ಲಿ ಆರೋಪಿಯ ವಿರುದ್ಧ ಹೊರಡಿಸಿದ್ದ ಉದ್ಘೋಷಣೆಯನ್ನು ಓದಿ ಹೇಳಿರುತ್ತೇನೆ ಹಾಗೂ ಉದ್ಘೋಷಣೆಯ ಒಂದು ಪ್ರತಿಯನ್ನು ಸ್ಥಳದಲ್ಲಿ ಅಂಟಿಸಿರುತ್ತೇನೆ. ನಂತರದಲ್ಲಿ ನ್ಯಾಯಾಲಯದ ಆವರಣದಲ್ಲಿಯೂ ಉದ್ಘೋಷಣೆಯ ಒಂದು ಪ್ರತಿಯನ್ನು ಅಂಟಿಸಿರುತ್ತೇನೆ. ಸದರಿ ಉದ್ಘೋಷಣೆಯ ಸಮಯದಲ್ಲಿ ಮಾಡಿದ ಮಹಜರ್ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-9 ಎಂದು ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ಉದ್ಘೋಷಣೆಗೆ ಸಂಬಂಧಿಸಿದಂತೆ ತೆಗೆದ 4 ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಮೈಸೂರು ಮಹಾನಗರ ಪಾಲಿಕೆಯವರು 1 ನೇ ಆರೋಪಿಗೆ ಸದರಿ ಜಾಗದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂಬ ದೃಢೀಕರಣ ಪತ್ರವಾಗಿರುತ್ತದೆ. ಸದರಿ ದೃಢೀಕರಣ ಪತ್ರವನ್ನು ನಿಪಿ-11 ಎಂದು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯು ಬೆಂಗಳೂರು ಮಹಾನಗರ ಪಾಲಿಕೆಯವರು 2 ನೇ ಆರೋಪಿಗೆ ಸದರಿ ಜಾಗದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂಬ ದೃಢೀಕರಣ ಪತ್ರವಾಗಿರುತ್ತದೆ. ಸದರಿ ದೃಢೀಕರಣ ಪತ್ರವನ್ನು ನಿಪಿ-12 ಎಂದು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**